# ಎಸ್.ಎಸ್.ಎಲ್.ಸಿ. ಅರ್ಧವಾರ್ಷಿಕ ಪರೀಕ್ಷೆ.

## ಮಾದರಿ ಪ್ರಶ್ನೆಪತ್ರಿಕೆ – 1

**ಗರಿಷ್ಠ ಅಂಕಗಳು : 100.** **ಪ್ರಥಮಭಾಷೆ ಕನ್ನಡ** **CCE RF** **ಸಂಕೇತ ಸಂಖ್ಯೆ 01–K** **ಅವಧಿ : 3 ಗಂಟೆಗಳು.**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **06∗1=06**

1. ಇವುಗಳಲ್ಲಿ ಸಪ್ತಮೀ ವಿಭಕ್ತಿಯ ಕಾರಕಾರ್ಥ .

   (ಎ) ಕರ್ಮಾರ್ಥ (ಬಿ) ಕರಣಾರ್ಥ (ಸಿ) ಸಂಪ್ರದಾನ (ಡಿ) ಅಧಿಕರಣ

2. 'ಹೋದಾನು' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;

   (ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ (ಸಿ) ನಿಷೇಧಾರ್ಥಕ (ಡಿ) ಭಾವನಾರ್ಥಕ

3. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ;

   (ಎ) ಉದ್ಧರಣ (ಬಿ) ಅಲ್ಪವಿರಾಮ (ಸಿ) ಅರ್ಧವಿರಾಮ (ಡಿ) ಆವರಣ

4. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು;

   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

5. 'ರಾಜೀವಸಖ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;

   (ಎ) ಕರ್ಮಧಾರಯ (ಬಿ) ದ್ವಂದ್ವ (ಸಿ) ತತ್ಪುರುಷ (ಡಿ) ಬಹುವ್ರೀಹಿ

6. 'ಸಕ್ಕಾರಿ' ಪದದ ಗ್ರಾಂಥಿಕ ರೂಪವಿದು;

   (ಎ) ಶರ್ಕರ (ಬಿ) ಸಕ್ಕರೆ (ಸಿ) ಸಕ್ಕರಿ (ಡಿ) ಸಿಹಿ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4∗1=4**

7. ಕುಠಾರ : ಕೊಡಲಿ :: ಅಂಕಣ : ________
8. ವಿದ್ಯಾರ್ಥಿ : ಅನ್ವರ್ಥನಾಮ :: ಸಹದೇವ : ________
9. ಅಥವಾ : ಸಂಬಂಧಾರ್ಥಕಾವ್ಯಯ :: ದಡದಡ : ________
10. ದಿನದಿನ : ದ್ವಿರುಕ್ತಿ :: ಸೊಪ್ಪುಸದೆ : ________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **07∗1=07**

11. ಯುದ್ಧದ ಕಾಲದಲ್ಲಿ ಗಡಿ ಪ್ರದೇಶದಲ್ಲಿ ಯಾವ ನಿಯಮವನ್ನು ಪಾಲಿಸಲಾಗುತ್ತದೆ ?
12. ಶಬರಿ ಯಾರ ಆಶ್ರಮದಲ್ಲಿ ವಾಸವಾಗಿದ್ದಳು ?
13. ನೆಲ್ಸನ್ ಅವರ ಮೂರ್ತಿ ಇರುವ ಸ್ಥಳ ಯಾವುದು ?
14. ನಾಲ್ವಡಿ ಕೃಷ್ಣರಾಜ ಒಡೆಯರ್‌ರ ರಿಜೆಂಟ್ ಆಗಿದ್ದವರು ಯಾರು ?

15. ನದಿ ಜಲಗಳ ಸ್ಥಿತಿ ಏನಾಗಿದೆ ?

16. ಕುಂಪನಿ ಸರಕಾರ ಹೊರಡಿಸಿದ ಆದೇಶವೇನು ?

17. ಪುಟ್ಟಿ ಯಾರನ್ನು ಕಂಡು ಮೂಕವಿಸ್ಮಿತಳಾಗಿದ್ದಾಳೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20**

18. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು ?

19. ಲೇಖಕರು ಮನುಷ್ಯನಂತೆ ಟೊಪ್ಪಿಗೆ ಎಂದು ಏಕೆ ಹೇಳಿದ್ದಾರೆ ?

20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾಗಿದ್ದವು ?

21. ಹೈದರಾಬಾದ್ ಭಾರತದ ಸುಯೋಜಿತ ನಗರ ಆಗುವಲ್ಲಿ ವಿಶ್ವೇಶ್ವರಯ್ಯ ಅವರ ಕೊಡುಗೆ ಏನು ?

22. ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ ?

23. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?

24. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

25. ವಿವೇಕಾನಂದರ ವ್ಯಕ್ತಿತ್ವ ಇಂದಿಗೂ ಸತ್ಯ ಏಕೆ ?

26. ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ ಪ್ರಕೃತಿ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

27. ಜಲಿಯನ್ ವಾಲಾಭಾಗ್‌ನಲ್ಲಿರುವ ಒಕ್ಕಣೆ ಏನು ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

28. "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?"

29. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"

30. "ಕೈಗಾರಿಕರಣ ಇಲ್ಲವೇ ಅವನತಿ"

31. "ಹೊಸ ಎಚ್ಚರದೊಳು ಬದುಕೋಣ"

32. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

33. "ನಿನ್ನಪದೆಸೆಯ ಬಯಸುವನಲ್ಲ"

**VI. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

34. ಪು. ತಿ. ನರಸಿಂಹಚಾರ್

35. ದ. ರಾ. ಬೇಂದ್ರೆ

**VII. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3**

36. ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವೆ
ನೆನಲು ತೊಡೆಸೊಂಕಿನಲಿ ಸಾರಿದು ಶೌರಿಯಿಂತೆಂದ ॥

**VIII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಗೊಳಿಸಿರಿ. 1*3=3**

37. ಸಾವಿತ್ರಿಯ ಮುಖಕಮಲ ಅರಳಿತು.

**IX. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

- ಮಾತೇ ಮುತ್ತು ಮಾತೇ ಮೃತ್ಯು
- ತಾಳಿದವನು ಬಾಳಿಯಾನು.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4**

39. ನೀಲಮೇಘ ________________ ಅಥವಾ ಯುಗಯುಗಗಳ________________

________________________

________________________

________________________

ಹಕ್ಕಿ ಹಾರುತಿದೆ ನೋಡೊದಿರಾ ।

ಅಥವಾ

ಯುಗಯುಗಗಳ________________

________________________

________________________

________________________

ಹಕ್ಕಿ ಹಾರುತಿದೆ ನೋಡೊದಿರಾ ।

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1*4=4**

40. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡ ಗೋಡೆಗಳ
ಕೆಡವುತ ಸೇತುವೆಯಾಗೋಣ.

**XII ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8**

41. 'ತಾಳಿದವನು ಬಾಳಿಯಾನು' ಎಂಬ ಗಾದೆ ಶಬರಿಯ ಪಾಲಿಗೆ ನಿಜವಾದ ಬಗೆ ಹೇಗೆ ? ತಿಳಿಸಿ.

ಅಥವಾ

ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ?

ಅಥವಾ

ಯುದ್ಧದ ವಿಚಾರದಲ್ಲಿ ಕರ್ಣನ ನಿರ್ಧಾರವೇನು ವಿವರಿಸಿ.

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04=04 (2+2)**

43. ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆಂಗ್ಲಜನತೆ ಸಾಹಸಜೀವಿಯಾಯಿತು, ಬು

ದ್ಧಿಶಾಲಿಯಾಯಿತು, ಸೂರ್ಯನು ಎಂದೂ ಮುಳುಗನೆನ್ನುವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ ವಿಚಾರ ಮುಂತಾದುವನ್ನು ಆ ಭಾಷೆಯ ಮುಖಾಂತರ ವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ ಕೃಷಿ ಕಾರಣವೆಂದು ಬೇರೆ ಹೇಳಬೇಕಿಲ್ಲ.

ಪ್ರಶ್ನೆಗಳು :– 1. ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ ?

2. ಆಂಗ್ಲಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

39. ನಿಮ್ಮನ್ನು ಬೆಳಗಾವಿ ಜಿಲ್ಲೆಯ ಕಾಗವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಮರ್ಥ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ 'ಸದ್ಭಾವನಾ ದಿನೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ, ಬೆಳಗಾವಿಯಲ್ಲಿರುವ 'ಕನ್ನಡ ಪ್ರಭ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಶ್ರೀರಂಗಪಟ್ಟಣದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ವಿವೇಕ' ಎಂದು ಭಾವಿಸಿಕೊಂಡು, ಬೆಂಗಳೂರಿನ ಸದಾಶಿವನಗರದ ನಿವಾಸಿಯಾದ ನಿಮ್ಮ ತಂದೆಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

- ಸ್ವಚ್ಛಭಾರತ, ಸ್ವಸ್ಥ ಭಾರತ.
- ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದಾಗುವ ಪರಿಣಾಮಗಳು.

---- 0 0 0 0 ----

# ಎಸ್.ಎಸ್.ಎಲ್.ಸಿ. ಅರ್ಧವಾರ್ಷಿಕ ಪರೀಕ್ಷೆ.

## ಮಾದರಿ ಪ್ರಶ್ನೆಪತ್ರಿಕೆ – 2

**ಗರಿಷ್ಠ ಅಂಕಗಳು : 100.** **ಪ್ರಥಮಭಾಷೆ ಕನ್ನಡ** **CCE RF** **ಸಂಕೇತ ಸಂಖ್ಯೆ 01–K** **ಅವಧಿ : 3 ಗಂಟೆಗಳು.**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **06*1=06**

1. ಇವುಗಳಲ್ಲಿ ಷಷ್ಠಿ ವಿಭಕ್ತಿಯಿಂದ ಕೂಡಿದ ಪದವಿದು.

   (ಎ) ಬಿರುಗಾಳಿಗೆ (ಬಿ) ಭರವಸೆಗಳ (ಸಿ) ಬಿದ್ದುದನ್ನು (ಡಿ) ಮರದತ್ತಣಿಂ

2. ‘ಹಾಡು’ ಪದದ ವಿಧ್ಯರ್ಥಕ ರೂಪದ ;

   (ಎ) ಹಾಡಲಿ (ಬಿ) ಹಾಡಿಯಾಳು (ಸಿ) ಹಾಡ್ಬೋಣ (ಡಿ) ಹಾಡುತ್ತಾನೆ

3. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ಹೇಳುವಲ್ಲಿ ಈ ಚಿಹ್ನೆಯನ್ನು ಬಳಸುತ್ತಾರೆ.

   (ಎ) ಉದ್ಧರಣ (ಬಿ) ವಿವರಣ (ಸಿ) ಅರ್ಧವಿರಾಮ (ಡಿ) ಆವರಣ

4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು;

   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

5. ‘ರಾಜೀವಸಖ’ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;

   (ಎ) ಕರ್ಮಧಾರಯ (ಬಿ) ದ್ವಂದ್ವ (ಸಿ) ತತ್ಪುರುಷ (ಡಿ) ಬಹುವ್ರೀಹಿ

6. ಇವುಗಳಲ್ಲಿ ಯಣ್ ಸಂಧಿಗೆ ಉದಾಹರಣೆಯಾದ ಪದ ;

   (ಎ) ಬೃಹಚ್ಛತ್ರ (ಬಿ) ಕೋಟ್ಯಧೀಶ್ವರ (ಸಿ) ವಾಗ್ದೇವಿ (ಡಿ) ದಿಗಂತ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4*1=4**

7. ತವಸಿ : ತಪಸ್ವಿ :: ದಿಟ್ಟಿ : ____________
8. ವಿದ್ಯಾರ್ಥಿ : ಅನ್ವರ್ಥನಾಮ :: ಸಹದೇವ : ____________
9. ಮಸಲತ್ತು : ಪಿತೂರಿ :: ಕಸರತ್ತು : ____________
10. ತುತ್ತತುದಿ : ದ್ವಿರುಕ್ತಿ :: ಧೀರಶೂರ : ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **07*1=07**

11. ಯುದ್ಧದ ಕಾಲದಲ್ಲಿ ಬ್ಲಾಕ್ ಔಟ್ ನಿಯಮವನ್ನು ಎಲ್ಲಿ ಪಾಲಿಸಲಾಗುತ್ತದೆ ?
12. ರಾಮಲಕ್ಷ್ಮಣರಿಗೆ ಮತಂಗರ ಆಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?
13. ಸತ್ತವರ ಸ್ಮಾರಕ ಎಂದು ಯಾವುದನ್ನು ಕರೆಯುತ್ತಾರೆ ?
14. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಯಾವಾಗ ಪಟ್ಟಭಿಷಿಕ್ತರಾದರು ?

15. ಜಿ. ಎಸ್. ಶಿವರುದ್ರಪ್ಪ ಅವರು ಯಾವುದನ್ನು ಪಥಗಳು ಎಂದು ಕರೆದಿದ್ದಾರೆ ?

16. ಹಲಗಲಿ ಗುರುತು ಉಳಿಯದಂತಾದುದು ಏಕೆ ?

17. ಪುಟ್ಟಿ ಯಾರನ್ನು ಕಂಡು ಮೂಕವಿಸ್ಮಿತಳಾಗಿದ್ದಾಳೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20**

18. ಸತ್ತ ಮಗುವನ್ನು ನೋಡಿ ಮುದುಕಿಯು ನುಡಿದ ಮಾತುಗಳೇನು ?

19. ವೆಸ್ಟ್ ಮಿನಸ್ಟರ್ ಅಬೆಯ ರಾಜಮಂದಿರದಲ್ಲಿರುವ ಮೂರ್ತಿಗಳಹೆಸರುಗಳನ್ನು ತಿಳಿಸಿ.

20. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು ?

21. ಶಬರಿ ಶ್ರೀರಾಮನ ಗುಣಗಾನ ಮಾಡಿದ ಬಗೆ ಹೇಗೆ ?

22. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?

23. ಹಲಗಲಿ ಹೇಗೆ ಹಾಳಾಗಿ ಹೋಯಿತು ?

24. ಜಲಿಯನ್ ವಾಲಾಭಾಗ್‌ಗೆ ಬಂದ ಬಾಲಕ ಭಗತ್ ಸಿಂಗ ಏನು ಮಾಡಿದನು ?

25. ವಿವೇಕಾನಂದರು ಯಾವತ್ತೂ ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ ಕಾರಣವೇನು ?

26. ವಸಂತ ಯಾರಿಗೆ ಮುಖ ತೋರಲಿಲ್ಲ ? ಪುಟ್ಟಿಯ ಪ್ರಶ್ನೆಗಳೇನು ?

27. ಭಗತ್ ಸಿಂಗನ ಸಹಚರರು ಯಾರು ? ಅವರು ಅಮರರಾದುದು ಹೇಗೆ ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

28. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ"

29. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ"

30. "ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ"

31. "ಹೊಸ ಎಚ್ಚರದೊಳು ಬದುಕೋಣ"

32. "ಬಲ್ಲರು ಯಾರ ಹಾಕಿದ ಹೊಂಚ"

33. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

**VI. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

34. ಡಿ. ಎಸ್ ಜಯಪ್ಪಗೌಡ

35. ಕುಮಾರವ್ಯಾಸ

**VII. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3**

36. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ ॥

**VIII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಗೊಳಿಸಿರಿ.** **1*3=3**

37. ಎನ್ನ ಬಗೆಗನಿವಾರ್ಯವೀ ಶೋಕದುಲ್ಕೆ.

**IX. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

38. ಎ) ದೇಶ ಸುತ್ತಿ ನೋಡು, ಕೋಶ ಓದಿ ನೋಡು.

ಬಿ) ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1*4=4**

39. ಕೊರಳಸೆರೆ ಹಿಗ್ಗಿದವು ದೃಗುಜಲ

______________________

______________________

______________________

______________________

ನರುಹಿ ಕೊಂದನು ಹಲವು ಮಾತೆನೆಂದು ಚಿಂತಿಸಿದ ।

**ಅಥವಾ**

ಮಾರಿಗೌತನವಾಯ್ತು ನಾಳಿನ ಭಾರತವು

______________________

______________________

______________________

______________________

ವೀರರ್ಕೈವರ ನೋಯಿಸೆನು ರಾಜೀವಸಖನಾಣೆ ।

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1*4=4**

40. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ – ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ ?

**XII ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು ?

ಅಥವಾ

ವಿಶ್ವೇಶ್ವರಯ್ಯ ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಜಿ ಎಸ್ ಶಿವರುದ್ರಪ್ಪನವರ ಆಶಯ ?

ಅಥವಾ

ಸಂಕಲ್ಪಮತ್ತು ಅನುಷ್ಠಾನದ ಬಗ್ಗೆ ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04=04 (2+2)**

43. ಗಾಂಧೀಜಿಗೆ ಆಗ 12 ವರ್ಷ. ಶಾಲೆಯ ವಿದ್ಯಾರ್ಥಿ. ಚಿಕ್ಕವರಿದ್ದಾಗಿನಿಂದಲೂ ಅವರಿಗೆ ಸುಳ್ಳು ಹೇಳಿ ಗೊತ್ತಿರಲಿಲ್ಲ. ಒಂದು ಸಲ ಆತನ ಶಾಲೆಗೆ ಕಲಿಕೆಯ ಗುಣಮಟ್ಟ ಪರೀಕ್ಷಿಸಲು ಶಾಲಾ ಇನ್ಸ್‌ಪೆಕ್ಟರ್ ಒಬ್ಬರು ಬಂದರು. ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡಲು ಐದು ಪದಗಳ ಉಕ್ತಲೇಖನ ನೀಡಿದರು. ಅದರಲ್ಲಿ ಆಂಗ್ಲಭಾಷೆಯ **'ಕಿಟೆಲ್'** ಎಂಬ ಪದವೂ ಇತ್ತು. ಅದನ್ನು ಮೋಹನ್‌ದಾಸ್ ತಪ್ಪಾಗಿ ಬರೆದ. ತರಗತಿಯ ಉಪಾಧ್ಯಾಯರು ಅದನ್ನು ನೋಡಿದವರೇ ಪಕ್ಕದ ಹುಡುಗ ಬರೆದಿರುವುದನ್ನು ನೋಡಿ ಬರಿ ಎಂದು ಸನ್ನೆ ಮಾಡಿದರು. ಆದರೆ 'ಕಾಪಿ' ಮಾಡುವುದು ತಪ್ಪು ಎಂದು ಅವರ ಮನಸ್ಸು ಹೇಳಿತು. ಅವರು ತಮ್ಮ ಉಪಾಧ್ಯಾಯರ ಸೂಚನೆಯಂತೆ 'ಕಾಪಿ' ಮಾಡಲಿಲ್ಲ. ಇನ್ಸ್‌ಪೆಕ್ಟರ್ ಪರಿಶೀಲಿಸಿದಾಗ ಗಾಂಧಿಯೊಬ್ಬರೇ ತಪ್ಪು ಬರೆದಿದ್ದರು. ಇದರಿಂದ ಉಪಾಧ್ಯಾಯರು ಸಿಟ್ಟಾದರು. 'ದಡ್ಡ!' ಎಂದರು. ಗಾಂಧಿ ಉಪಾಧ್ಯಾಯರಿಗೆ ಎದುರು ಮಾತು ಹೇಳಲಿಲ್ಲ. ನಾನು ದಡ್ಡನಾದೆನಲ್ಲ ಎಂದು ದುಃಖಪಡಲಿಲ್ಲ. ತಾನು ಕಾಪಿ ಮಾಡಲಿಲ್ಲವಲ್ಲ ಎಂದು ಸಂತೋಷಪಟ್ಟರು. ಗಾಂಧಿ ಅವರು ಚಿಕ್ಕವರಿದ್ದಾಗ ಕೆಲವು ತಪ್ಪು ಕೆಲಸಗಳನ್ನು ಮಾಡಿದರು. ಆದರೆ ಯಾವಾಗ ಅದು ತಪ್ಪು ಎಂದು ಅವರಿಗೆ ಮನವರಿಕೆಯಾಯಿತೋ ನೇರವಾಗಿ ತಮ್ಮ ತಂದೆಯ ಬಳಿ ಹೋಗಿ ತಪ್ಪನ್ನು ಒಪ್ಪಿಕೊಂಡರು. ತಂದೆಯ ಕಣ್ಣುಗಳು ಒದ್ದೆಯಾದವು. ಅದಕ್ಕಿಂತ ಶಿಕ್ಷೆ ಬೇರೆ ಬೇಕೆ? 'ಆ ಮಮತೆಯ ಕಣ್ಣೀರು ನನ್ನ ಪಾಪಗಳನ್ನೆಲ್ಲ ತೊಳೆಯಿತು. ಅಹಿಂಸೆಯ ಪಾಠ ಕಲಿಸಿತು' ಎಂದು ಗಾಂಧಿಯವರೇ ಹೇಳಿದ್ದಾರೆ.

**ಪ್ರಶ್ನೆಗಳು :**

1. ಉಪಾಧ್ಯಾಯರು ಮೋಹನದಾಸನಿಗೆ **'ಕಾಪಿ'** ಮಾಡಲು ಪ್ರೇರೇಪಿಸಿದ ಸಂದರ್ಭವನ್ನು ಕುರಿತು ಬರೆಯಿರಿ.
2. ಗಾಂಧೀಜಿ ತಮ್ಮ ತಪ್ಪುಗಳನ್ನು ತಂದೆಯಲ್ಲಿ ಹೇಳಿಕೊಂಡ ಸನ್ನಿವೇಶ ಹಾಗೂ ಅವರ ಅನಿಸಿಕೆಯನ್ನು ತಿಳಿಸಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ **'ಪ್ರತಿಭಾ ಕಾರಂಜಿ'** ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ, **'ವಿಜಯ ಕರ್ನಾಟಕ'** ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ವಿಜಯಪುರದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿ 'ಸುಕೃತ' ಎಂದು ಭಾವಿಸಿಕೊಂಡು, ದೊಡ್ಡಬಳ್ಳಾಪುರದ ನಿವಾಸಿಯಾದ ನಿಮ್ಮ ತಾಯಿ ರಮಾದೇವಿ ಅವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

45. * ಗಂಥಾಲಯಗಳ ಮಹತ್ವ.

* ಪ್ರಕೃತಿ ವಿಕೋಪಗಳು ಮತ್ತು ಅದರ ಪರಿಣಾಮ.

---- 0 0 0 0 ----